(ಸದನವು 4.00 ಘಂಟೆಗೆ ಪುನರ್ ಸಮಾವೇಶಗೊಂಡಿತು. ಮಾನ್ಯ ಸಭಾಧ್ಯಕ್ಷರು (ಶ್ರೀ ಎಂವಿ. ವೆಂಕಟಪ್ಪನವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಅಧ್ಯಕ್ಷರು : ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

4 ಸಭೆಯ ಮುಂದಿಡಲಾದ ಕಾಗದ ಪತ್ರಗಳು:

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ, ಭಾರತದ ಲೆಕ್ಕಾ ನಿಯಂತ್ರಕರು ಮತ್ತು ಮಹಾಲೆಕ್ಕಾ ಪರಿಶೋಧಕರು, ನಗರ ಸ್ಥಳೀಯ ಸಂಸ್ಥೆಗಳು, ಬೆಂಗಳೂರು (ನಗರ) ಜಿಲ್ಲೆಯ 1998–99 ರಿಂದ 2001–2002 ವರ್ಷಗಳಿಗೆ ನೀಡಿರುವ ಕರ್ನಾಟಕ ಸರ್ಕಾರದ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇವೆ.

ಅಧ್ಯಕ್ಷರು : ಮಂಡಿಸಲಾಯಿತು

5 ಪ್ರಕಟಣೆ

ಅಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಗಳಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ.

'ಕರ್ನಾಟಕ ವಿಧಾನಪರಿಷತ್ತು ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 118 ರ ಮೇರೆಗೆ ವಿಧಾನಪರಿಷತ್ತಿನಿಂದ ಈ ಕೆಳಕಂಡ ವಿಧಾನಸಭೆಯ ವಿಧೇಯಕಗಳನ್ನು ದಿನಾಂಕ : 11ನೇ ಫೆಬ್ರವರಿ 2004ರಂದು ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಲಾಯಿತು ಎಂದು ತಿಳಿಸಿರುತ್ತಾರೆ.'

1. ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ವಿಧೇಯಕ, 2004

2. ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಆಧಿಭೋಗದಾರರನ್ನು ಹೊರಹಾಕುವ) (ತಿದ್ದುಪಡಿ) ವಿಧೇಯಕ, 2003

3. ಕರ್ನಾಟಕ ಪಶು ವೈದ್ಯಕೀಯ ಹಾಗು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕ, 2004

4. ಕರ್ನಾಟಕ ಕೃಷಿ ಉತ್ಪನ್ನ ಮರುಕಟ್ಟೆ ವ್ಯವಹಾರ (ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2004

5. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 2004

6 ಶಾಸನ ರಚನೆ

ಬೆಂಗಳೂರು ಮಾಹಿತಿ ತಂತ್ರಜ್ಞಾನ ವಿಕಾಸ ವಲಯ ಪ್ರಾಧಿಕಾರ ವಿಧೇಯಕ, 2004

ಪರ್ಯಾಲೋಚನಾ ಪ್ರಸ್ತಾವ

†ಶ್ರೀ ಡಿ.ಬಿ. ಇನಾಂದಾರ್ (ಮಾಹಿತಿ, ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು) : ಮಾನ್ಯ ಅಧ್ಯಕ್ಷರೆ, " 2004ರ ಕರ್ನಾಟಕ ಮಾಹಿತಿ ತಂತ್ರಜ್ಞಾನ ವಿಕಾಸ ವಲಯ ಪ್ರಾಧಿಕಾರ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಡಿ.ಬಿ. ಇನಾಂದಾರ್ (ಮಾಹಿತಿ, ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು) : ಮಾನ್ಯ ಅಧ್ಯಕ್ಷರು, ಬೆಂಗಳೂರು ಮಾಹಿತಿ ತಂತ್ರಜ್ಞಾನ ವಿಕಾಸ ವಲಯ ಪ್ರಾಧಿಕಾರ ವಿಧೇಯಕವನ್ನು ಸಭೆಯಲ್ಲಿ ಮಂಡಿಸಿದ್ದು, ಇದರ ಉದ್ದೇಶ ಏನೆಂದರೆ ಅನ್‌ಪ್ಲಾನ್ಡ್ ಡೆವಲಪ್‌ಮೆಂಟ್ ಆಗಬಾರದು ಎನ್ನುವ ದೃಷ್ಟಿಯಿಂದ ಬಹಳಷ್ಟು ಜನ ಇಲ್ಲಿ ಐ.ಟಿ ಕಂಪನಿಗಳು ಇಂಟರ್‌ನ್ಯಾಷನ್ ಮತ್ತು ನಮ್ಮ